ಕವಯಿತ್ರಿಯಾಗಿ ಗುರುತಿಸಿಕೊಂಡಿರುವ ಆಶಾ ಜಗದೀಶ್ ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರಿನಲ್ಲಿ ಶಿಕ್ಷಕಿ. ಕಥೆ, ಪ್ರಬಂಧಗಳ ಬರವಣಿಗೆಯಲ್ಲಿಯೂ ತೊಡಗಿಸಿಕೊಂಡಿದ್ದಾರೆ. 'ಮೌನ ತಂಬೂರಿ' ಅವರ ಚೊಚ್ಚಲ ಕವನ ಸಂಕಲನ ಪ್ರಕಟವಾಗಿದೆ.

ತುಂಬಿ ಬದುಕು ಎಂದರೆ ಎಷ್ಟು ಸುಂದರ ಎನ್ನುವ ಹಾಗೆ ಮಾಡಿದ್ದ. ಮಾಧವನೂ ಮುದ್ದು ಮನಸಿನ ಗಂಡ. ಇನ್ನೇನು ತಾನೆ ಬೇಕು....

ಆದರೆ ಯಾವಾಗ ಬದುಕು ಮಾಗಿಯ ಚಳಿಗೆ ಸಿಕ್ಕು ನಡುಗತೊಡಗಿತೋ ಗೊತ್ತಿಲ್ಲ. ಇತ್ತೀಚೆಗೆ ಮಾಧವ ಬದಲಾಗಿದ್ದ. ಅವರ ನಡುವೆ ಇದ್ದ ದಾಂಪತ್ಯ ಎನ್ನುವ ಸಂಬಂಧವೇ ಮಾಯವಾಗತೊಡಗಿದ್ದು ಯಾವ ಮಾಯದಲ್ಲಿ?! ತಿಳಿಯಲಿಲ್ಲ. ಕಾರಣ ಗೊತ್ತಿದ್ದರೆ ಏನಾದರೂ ಮಾಡಬಹುದಿತ್ತು. ಆದರೆ ಮಾಧವನ ಮನಸ್ಸನ್ನು ಅರಿಯುವ ಮಾರ್ಗವೇನು. ಯಾರಿಗಾದರೂ ಸರಿ ಏನೆಂದು ಹೇಳಲಿ ಎಂದೇ ಅರ್ಥವಾಗುತ್ತಿರಲಿಲ್ಲ ಅವಳಿಗೆ. ಒಂದಿನ ಹೊಡೆದವನಲ್ಲ, ಬೈದವನಲ್ಲ. ಈಗಲಾದರೂ ತನ್ನ ಪಾಡಿಗೆ ತಾನು ಒದ್ದಾಡುತ್ತಿದ್ದಾನೆಯೇ ಹೊರತು ಏನೊಂದನ್ನೂ ಬಾಯಿ ಬಿಟ್ಟು ಹೇಳುತ್ತಿಲ್ಲ.

ಮಳೆ ಕೊಂಚ ಸುಧಾರಿಸಿಕೊಳ್ಳುತ್ತಿತ್ತು. ಸುಸ್ವರ ಇನ್ನೂ ಮನೆಗೆ ಬಂದಿರಲಿಲ್ಲ. ಸುಸ್ವರನ ನೆನಪಾದ ಕೂಡಲೆ ಹಾಸಿಗೆಯಿಂದ ದಿಗ್ಗನೆ ಎದ್ದು ತಲೆಬಾಗಿಲಿಗೆ ಬಂದಳು ಪ್ರತಿಮಾ. ಎರಡು ಮೂರು ಬಾರಿ ಕೂಗು ಹಾಕಿದಳು. ಸುಸ್ವರ, 'ಹ್ಞು ಹ್ಞಾ' ಎನ್ನಲಿಲ್ಲ. ಶ್ಯಾಮಲಕ್ಕಯ್ಯನ ಮನೆಗೆ ಹೋದಳು. 'ಶ್ಯಾಮಲಕ್ಕಯ್ಯ ನಮ್ ಸುಸ್ವರ ಅದಾನಾ?' ಕೇಳಿದಳು. 'ಇಲ್ಲೇ... ಅವ ಇಲ್ಯಾಕ್ ಬರ್ತಾನ? ಅದೂ ಈ ಮಳ್ಯಾಗ?' ಎಂದು ಶ್ಯಾಮಲಕ್ಕಯ್ಯ ಹೇಳುವಾಗ ಗಣೇಶ ಮೆತ್ತಿ ಇಳಿದು ಬಂದ. 'ಗಣೇಶಣ್ಣ ಅದಾನು ಅಂತ ಬಂದ ಮಳ್ಯಾಗೇನೆ...' ಅನ್ನುವ ಹೊತ್ತಿಗೆ ಒಂದು ನಮೂನಿ ಗಾಬರಿ ಆವರಿಸತೊಡಗಿತು ಅವಳಿಗೆ. ಗಣೇಶ, 'ಇಲ್ಲ ಚಿಕ್ಕಿ, ನಾ ಮೇಲೆ ಮಲ್ಗಿದ್ನಲ್ಲ... ಸುಸ್ವರ ಇಲ್ಲಿಗೆ ಬಂದೇ ಇಲ್ಲ' ಅಂದ. ಮತ್ತೆ ಪ್ರತಿಮಾ ಗಾಬರಿ ಆಗಿರುವುದನ್ನು ನೋಡಿ, 'ನಡೀರಿ ನಾನೂ ನಿಮ್ ಜೊತಿ ಬರ್ತೀನಿ, ಎಲ್ಲಿದಾನೋ ಹುಡುಕೋಣ...' ಎನ್ನುತ್ತಾ ಗಣೇಶ ಅವಳೊಟ್ಟಿಗೆ ಹೊರಟ.

ಅವರಿದ್ದ ಪುಟ್ಟ ಮಲೆನಾಡಿನ ಹಳ್ಳಿಯನ್ನು ಹುಡುಕಲು ಎಷ್ಟು ಹೊತ್ತು ಬೇಕು. ಎಲ್ಲಿಯೂ ಸುಸ್ವರನ ಸುಳಿವಿರಲಿಲ್ಲ. ಊರೊಳಗಿಲ್ಲ ಎಂದರೆ ಕಾನು ಇಲ್ಲವೇ ಕೆರೆ ಹುಡುಕಬೇಕು... ಕಾನು, ಕೆರೆ ಅಂದ ಕೂಡಲೇ ಪ್ರತಿಮಾ ಅಪ್ರತಿಭಳಾದಳು. ಕಣ್ಣೀರು ಹರಿಯತೊಡಗಿತು. ಕೆರೆ ದಾರಿಯಲ್ಲಿ ನಾಲ್ಕು ಹೆಜ್ಜೆ ಹಾಕಿರಲಿಲ್ಲ, ಮಳೆ ಶುರುವಾಗೇ ಬಿಟ್ಟಿತು. ಬರುವ ಧಾವಂತದಲ್ಲಿ ಕೊಡೆ ಹೋಗಲಿ ಕೊಪ್ಪಾಳೆಯನ್ನೂ ತಂದಿರಲಿಲ್ಲ. ಅಲ್ಲೇ ಇದ್ದ ಮಾವಿನ ಮರದ ಕೆಳಗೆ ಇಬ್ಬರೂ ನಿಂತರು. ಮಳೆ ನಿಲ್ಲುವ ಹಾಗೆ ಕಾಣಲಿಲ್ಲ. ಮಳೆ ನಿಲ್ಲುವುದನ್ನು ಕಾಯುತ್ತಾ ಕೂರುವುದಕ್ಕೆ ಪ್ರತಿಮಾಳಿಂದಾಗಲಿಲ್ಲ. 'ಇರು ಗಣಿ ನಾ ಹೋಗಿ ಕೆರೆ ನೋಡಿ ಬರ್ತಿನಿ ಆಯ್ತಾ...' ಎನ್ನುತ್ತಾ ಹೆಜ್ಜೆ ಹಾಕಿದಳು. ಗಣಿಯೂ ಅವಳನ್ನು ಹಿಂಬಾಲಿಸಿದ. ಅವರು ಇನ್ನೇನು ಕೆರೆಯನ್ನು ತಲುಪಬೇಕು, ದೂರದಿಂದಲೇ ಅಲ್ಲಿ ನಿಂತಿರುವ ನಾಲ್ಕಾರು ಹುಡುಗರು ಕಾಣಿಸಿದರು. ಅದರಲ್ಲಿ ಆಕಾಶ ನೀಲಿ ಶರ್ಟು ತೊಟ್ಟಿದ್ದ ಸುಸ್ವರ ನಿಂತಿರುವುದೂ ಕಾಣಿಸಿತು. ಅವರೆಲ್ಲ ಕೆರೆಗೆ ಹರಿದು ಬರುತ್ತಿದ್ದ ನೀರಿನಲ್ಲಿ ಆಡುತ್ತಿದ್ದರು. ಎಲ್ಲೆಲ್ಲಿಂದಲೋ ಏನೇನೋ ಕಸಕಡ್ಡಿ ಜೋಂಡನ್ನು ಕೊಚ್ಚಿಕೊಂಡು ಬರುತ್ತಿದ್ದ ನೀರಿನ ಹರಿವಿನ ಮೇಲೆ ಅಡಕೆ ಹಾಳೆಯನ್ನು ದೋಣಿಯಂತೆ ತೇಲಿ ಬಿಡುತ್ತಾ ಆಟವಾಡುತ್ತಿದ್ದರು. ಮೊಣಕಾಲಿಗಿಂತ ಸ್ವಲ್ಪವೇ ಕೆಳ ಮಟ್ಟಕ್ಕಿದ್ದ ನೀರಿನೊಳಗೆ ಹಾರಿ ಕುಣಿದು ನೆಗೆದು ಕೇಕೆ ಹಾಕುತ್ತಿದ್ದರು.

ಇಷ್ಟು ಹೊತ್ತೂ ಇದ್ದ ಗಾಬರಿ, ದುಃಖವೆಲ್ಲ ಎಲ್ಲಿ ಹೋಯಿತೋ, ಮಗನ ಆಟ ನೋಡಿ ಪ್ರತಿಮಾಳಿಗೆ ಕೆಟ್ಟ ಕೋಪ ಬಂತು. ಅಲ್ಲೆ ಪಕ್ಕದಲ್ಲಿದ್ದ ಪೊದೆಯೊಂದರ ಕೊಂಬೆಯನ್ನು ಮುರಿದು, ಎಲೆ ತರಿದು ಹಾಕಿ ತಂದವಳೇ ಸುಸ್ವರನ ಕುಂಡಿಯ ಮೇಲೆ ರಪ್ಪನೆ ಬಾರಿಸಿದಳು. ಯಾವುದೋ ಸ್ವರ್ಗಲೋಕದಲ್ಲಿರುವಂತೆ ತನ್ಮಯನಾಗಿದ್ದ ಸುಸ್ವರನಿಗೆ, ತನ್ನ ಅಮ್ಮ ಬಂದದ್ದೇ ತಿಳಿದಿರಲಿಲ್ಲ. ಸಾಲದ್ದಕ್ಕೆ ಈ ಸರ್ಪ್ರೈಸ್ ಏಟು ಬೇರೆ. 'ಯಪ್ಪಲ್ಲೇ' ಎಂದು ತಕತಕ ಕುಣಿದಾಡಿದ. ಕುಂಡಿಯ